
# ಟರ್ನೋವರ್ ಪ್ಯಾಂಟ್


*ಇಂದು ನಾವು ಸ್ಟ್ರೆಚ್ ಫ್ಯಾಬ್ರಿಕ್‌ನಲ್ಲಿ ಪ್ಯಾಂಟ್ ಮೇಲೆ ಟರ್ನ್ ಹೊಲಿಯುವುದು ಹೇಗೆ ಎಂದು ಕಲಿಯುತ್ತೇವೆ*
















## ವಸ್ತುಗಳ ವಿವರ

ಪ್ಯಾಂಟಿಗೆ ಬೇಕಾದ 60 ಇಂಚು ಅಗಲವಿರುವ 1.5 ಮೀಟರ್ ಸ್ಟ್ರೆಚಬಲ್ ಬಟ್ಟೆ

1 ಮೀಟರ್ ಸ್ಟ್ರೆಚಬಲ್ ಬಟ್ಟೆ (ಹೊಸೈರಿ ಬಟ್ಟೆ) ವೈಸ್ಟ್ ಬೆಲ್ಟ್ ಹೊಲೆಯಲು

www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ ಟರ್ನೋವರ್ ಪ್ಯಾಂಟಿನ ಟೆಂಪ್ಲೇಟ್

ಮಾರ್ಕರ್

ಕತ್ತರಿ

ಬಟ್ಟೆಗೆ ಹೋಲುವ ದಾರಗಳು.

ಈ ವೀಡಿಯೋದಲ್ಲಿ ನೀವು ಟೆಂಪ್ಲೇಟ್ ಮಾರ್ಕಿಂಗ್, ಪ್ಯಾಂಟಿನ ಮುಂಭಾಗ ಮತ್ತು ಹಿಂಭಾಗವನ್ನು ವೈಸ್ಟ್ ಬ್ಯಾಂಡ್ ನೊಂದಿಗೆ ಕತ್ತರಿಸುವುದು, ಮುಂಭಾಗ ಮತ್ತು ಹಿಂಭಾಗದ ಕ್ರಾಚನ್ನು ಹೊಲೆಯುವುದು, ಒಳಭಾಗದ ಮತ್ತು ಹೊರಭಾಗದ ಸೀಮ್ಸನ್ನು ಹೊಲೆಯುವುದು. ವೈಸ್ಟ್ ಬ್ಯಾಂಡನ್ನು ತಯಾರಿಸಿ ಪ್ಯಾಂಟಿಗೆ ಹೊಲೆಯುವುದು ಮತ್ತು ಹೆಮ್ ಲೈನನ್ನು ಹೊಲೆಯುವುದನ್ನು ಕಲೆಯುತ್ತೀರಿ.

ನಾವೀಗ ಬಟ್ಟೆಯನ್ನು ಮೇಜಿನ ಮೇಲಿಡುವುದರಿಂದ ಪ್ರಾರಂಭಿಸೋಣ. ನಿಮ್ಮ ಬಟ್ಟೆಯನ್ನು ಅರ್ಧಕ್ಕೆ ಬಟ್ಟೆಯ ಹಿಂಭಾಗ ನಿಮ್ಮನ್ನು ನೋಡುವಂತೆ ಬರುವಂತೆ ಮಡಚಬೇಕು.ಮತ್ತು ಬಟ್ಟೆಯ ಬಲ ಭಾಗ ಒಂದಕ್ಕೊಂದು ಕಾಣುವಂತೆ ಇರಬೇಕು.

## ಹಂತ 1 : ಟೆಂಪ್ಲೇಟನ್ನು ಮಾರ್ಕ್ ಮಾಡಿ ಕಟ್ ಮಾಡುವುದುಡುವುದು

www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ ಮುಂಭಾಗ ಹಾಗು ಹಿಂಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡಬೇಕು. ಬೀಡೆಡ್ ಪಿನ್ ಗಳ ಸಹಾಯದಿಂದ ಎರಡೂ ಟೆಂಪ್ಲೇಟನ್ನು ಬಟ್ಟೆಗೆ ಪಿನ್ ಮಾಡಿ. ಪಿನ್ ಬಟ್ಟೆಯ ಎರಡೂ ಪದರಕ್ಕೆ ಸೇರಿದೆಯೆ ಎಂದು ಖಾತ್ರಿಪಡಿಸಿಕೊಳ್ಳಿ

ಮಾರ್ಕಿಂಗ್ ಪೆನ್ನನ್ನು ತೆಗೆದುಕೊಂಡು ಟೆಂಪ್ಲೇಟಿನ ಸುತ್ತಲೂ ಮಾರ್ಕ್ ಮಾಡಿ. ಇದನ್ನು ಟೆಂಪ್ಲೇಟಿನ ಮುಂಭಾಗ ಮತ್ತು ಹಿಂಭಾಗ ಎರಡೂ ಕಡೆ ಮಾಡಬೇಕು. ಈಗ ಪಿನ್ ಗಳನ್ನು ತೆಗೆದು ಪಕ್ಕಕ್ಕಿಡಿ. ನಂತರ ಕತ್ತರಿಯನ್ನು ತೆಗೆದುಕೊಂಡು ಮಾರ್ಕಿಂಗ್ ಮೇಲೆ ಕತ್ತರಿಸಿ. ಹುಷಾರಾಗಿ ಕತ್ತರಿಸಿ, ಕೈಯನ್ನು ಭದ್ರವಾಗಿಟ್ಟುಕೊಳ್ಳಿ, ಮುಖ್ಯವಾಗಿ ಅಂಚುಗಳು ಸ್ವಲ್ಪ ಕಷ್ಟವೆನಿಸಬಹುದು.

ನೀವು ಕಟ್ ಮಾಡಿರುವ ಪೀಸಸ್ ಹೀಗೆ ಕಾಣಬೇಕು.






ನಾವೀಗ ವೈಸ್ಟ್ ಬ್ಯಾಂಡಿನ ಕೆಲಸ ಮಾಡೋಣ. ವೈಸ್ಟ್ ಬ್ಯಾಂಡಿನ ಬಟ್ಟೆಯನು ತೆಗೆದುಕೊಂಡು ಅರ್ಧಕ್ಕೆ ಮಡಚಿ. www.ushasew.com ನಿಂದ ಡೌನ್ಲೋಡ್ ಮಾಡಿಕೊಂಡ ಟೆಂಪ್ಲೇಟನ್ನು ಬಟ್ಟೆಯ ಮೇಲಿಡಿ. ಕ್ರೂಸ್ ಗಳ ಮೇಲೆ ಗಮನವಿರಲಿ ಅದರ ಮೇಲೆ ವೈಸ್ಟ್ ಬ್ಯಾಂಡಿನ ಉದ್ದ ಮತು ಸುತ್ತಳತೆ ಬರೆದಿರುತ್ತದೆ. ಈಗ ಟೆಂಪ್ಲೇಟನ್ನು ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ.
ಒಮ್ಮೆ ಮಾಡಿದ ನಂತರ, ಗುರುತು ಮಾಡುವ ಪೆನ್ನು ತೆಗೆದುಕೊಂಡು ಬಟ್ಟೆಯ ಮೇಲೆ ಟೆಂಪ್ಲೇಟ್ ಅನ್ನು ಪತ್ತೆ ಮಾಡಿ. ನಂತರ ಟೆಂಪ್ಲೇಟ್ ಅನ್ನು ಅನ್ಪಿನ್ ಮಾಡಿ ಮತ್ತು ಡ್ರಾ ಮಾಡಿದ ಗುರುತುಗಳನ್ನು ಕತ್ತರಿಸಲು ಕತ್ತರಿ ಬಳಸಿ. ಅದನ್ನು ಎಚ್ಚರಿಕೆಯಿಂದ ಮತ್ತು ಸ್ಥಿರವಾದ ಕೈಯಿಂದ ಮಾಡಿ.



## ಹಂತ 2 : ಕ್ರಾಚ್ ಎರಿಯಾವನ್ನು ಹೊಲೆಯುವುದು

ನಾವು ಮೊದಲು ಮುಂಭಾಗ ಮತ್ತು ಹಿಂಭಾಗದ ಪೀಸಸ್ನ್ ಒಂದೊಂದಾಗಿ ಕ್ರಾಚ್ ಎರಿಯಾದಲ್ಲಿ ವೀಡಿಯೊದಲ್ಲಿ ತೋರಿಸಿರುವಂತೆ ಕೆಲಸ ಮಾಡೋಣ. ಈಗ ಮತ್ತೆ ಬೀಡೆಡ್ ಪಿನ್ ಗಳನ್ನು ತೆಗೆದುಕೊಂಡು ಪೀಸಸನ್ನು ಭದ್ರಗೊಳಿಸಲು ಪಿನ್ ಗಳನ್ನು ಹಾಕಿ.






ಈಗ ಪೀಸಸನ್ನು ಊಷಾ ಜನೋಮ್ ಡ್ರೀಮ್ ಮೇಕರ್ 120 ಸೀವಿಂಗ್ ಮಷೀನಿನ ಹತ್ತಿರ ತೆಗೆದೊಕೊಂಡು ಹೋಗಿ. ಕ್ರಾಚ್ ಎರಿಯಾವನ್ನು ಪ್ರೆಸರ್ ಫುಟ್ಗೆ ಅಲೈನ್ ಮಾಡಿ. ನಂಬರ್ ಪ್ಯಾಡನ್ನು ಮೋಡ್ 1 ಅನ್ನು ಸೆಲೆಕ್ಟ್ ಮಾಡಿ, ಸ್ಟಿಚ್ ಪ್ಯಾಟರ್ನ್ ಅನ್ನು ಸ್ಟ್ರೈಟ್ ಸ್ಟಿಚಿಗೆ ಇಟ್ಟು ಹೊಲಿಗೆಯ ಉದ್ದ 2.2ಗೆ ಇಡಬೇಕು. ಈಗ ಸ್ಟಾರ್ಟ್ ಬಟನ್ ಒತ್ತಿ ಹೊಲೆಯಲು ಪ್ರಾರಂಭಿಸಿ. ಹೊಲೆಯುತ್ತಾ ಹೋಗುವಾಗ ಪಿನ್ ಗಳನ್ನು ತೆಗೆಯಿರಿ. ರಿವೆರ್ಸ್ ಹೊಲಿಗೆಯನ್ನು ಶುರುವಿನಲ್ಲಿ ಮತ್ತು ಕೊನೆಯಲ್ಲಿ ಹಾಕಲು ಮರೆಯಬೇಡಿ ಇದು ಹೊಲಿಗೆಯನ್ನು ಭದ್ರಗೊಳಿಸುತ್ತದೆ.


ನಾವೀಗ ಜಿಗ್ ಜಾಗ್ ಫೀಚರನ್ನು ಮಷೀನಿನಲ್ಲಿ ಬಳಸಿ ಹೊಲೆಯುತ್ತೇವೆ. ಬಟ್ಟೆಯ ಫ್ರೇಯ್ಡ್ ಅಂಚನ್ನು ನೀಟಾಗಿ ಕಾಣಲು ಈ ಹಂತವನ್ನು ಬಳಸುತ್ತೇವೆ. ಜಿಗ್ ಜಾಗ್ ಸ್ವಿಚನ್ನು ಒತ್ತಿ ಸ್ಟಿಚಿನ ಅಗಲವನ್ನು 4.5 ಗೆ ಇಟ್ಟು ಹೊಲಿಗೆಯ ಉದ್ದವನ್ನು 2ಕ್ಕೆ ಇಟ್ಟು ಹೊಲೆಯಲು ಪ್ರಾರಂಭಿಸಿ. ರಿವೆರ್ಸ್ ಹೊಲಿಗೆ ಇದಕ್ಕೆ ಅಗತ್ಯವಿಲ್ಲಾ.




ನಿಮ್ಮ ಕೊನೆಯ ಹೊಲಿಗೆ ಹೀಗೆ ಕಾಣಬೇಕು. ಈಗ ಪೀಸನ್ನು ಪಕ್ಕಕ್ಕಿಟ್ಟು ಇನ್ನೊಂದು ಪೀಸಿನ ಕೆಲಸ ಮಾಡೋಣ. ನಾವು ಇದರ ಮೇಲೂ ಕ್ರಾಚ್ ಎರಿಯಾವನ್ನು ಹೊಲೆಯಲು ಅದೇ ವಿಧಾನವನ್ನು ಅನುಸರಿಸೋಣ.


## ಹಂತ 3 : ಮುಂಭಾಗ ಮತ್ತು ಹಿಂಭಾಗವನ್ನು ಸೈಡ್ ಸೀಮ್ಸ್ ನೊಂದಿಗೆ ಹೊಲೆಯುವುದು,





ಈ ಹಂತ ಸೈಡ್ ಸೀಮ್ ನ್ನು ಹೊಲೆಯುವುದಾಗಿದೆ. ಪ್ಯಾಂಟಿನ ಹಿಂಭಾಗದ ಬಟ್ಟೆಯನ್ನು ತೆಗೆದುಕೊಂಡು ಮೇಜಿನ ಮೇಲಿಟ್ಟು ಅದರ ಮೇಲೆ ಮುಂಭಾಗದ ಪೀಸನ್ನು ಇಡಿ. ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಇದನ್ನು ಸರಿಯಾಗಿ ಅಲೈನ್ ಮಾಡಿದ ಮೇಲೆ ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ಪ್ಯಾಂಟಿನ ಸೈಡ್ ಸೀಮ್ಸ್ಗೆ ಪಿನ್ ಹಾಕಿ . ಎಲ್ಲಾ ಅಂಚುಗಳು ಅಲೈನ್ ಆಗಿದೆಯೇ ಅದು ಆಚೀಚೆ ಹೋಗದಂತೆ ಖಾತ್ರಿಪಡಿಸಿಕೊಳ್ಳಿ
ಇದಾದ ನಂತರ, ಪಿನ್ ನನ್ನು ಸೀಮ್ಸ್ ನ ಒಳಗಡೆ ವೀಡಿಯೊದಲ್ಲಿ ತೋರಿಸಿರುವಂತೆ ಪಿನ್ ಮಾಡಿ. ಕ್ರಾಚ್ ಸೀಮ್ ಸರಿಯಾಗಿದೆಯೇ ಎಂದು ನೋಡಿಕೊಳ್ಳಿ ಇದು ಇನ್ನರ್ ಸೀಮ್ ನ ಹೊಲಿಗೆಯನ್ನು ಸುಸ್ಸೂತ್ರವಾಗಿ ಹೊಲೆಯಲು ಅನುಕೂಲವಾಗುತ್ತೆದೆ.






ಹೊರಗಿನ ಸೀಮಿನ ಎಡ್ಜನ್ನು ಪ್ರೆಸ್ಸರ್ ಫುಟ್ ಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಹೊಲೆಯುವಾಗ ಬೇಡೆಡ್ ಪಿನ್ ಅನ್ನು ತೆಗೆಯುತ್ತಾ ಹೋಗಿ. ಪ್ಯಾಂಟಿನ ಅಂತ್ಯ ತಲಪುವ ವರೆಗೂ ಹೊಲೆಯಿರಿ.

ಸರಿಯಾಗಿ ಹೊಲೆದಿದ್ದರೆ ನಿಮ್ಮ ಹೊಲಿಗೆ ಇದನ್ನು ಹೋಲಬೇಕು. ಪ್ಯಾಂಟಿನ ಇನ್ನೊಂದು ಭಾಗಕ್ಕೂ ಇದೇ ವಿಧಾನವನ್ನು ಅನುಸರಿಸೋಣ. ಹೊಲೆಯುವುದನ್ನು ಮೇಲಿನಿಂದ ಪ್ರಾರಂಭಿಸಿ ಕೆಳಗಿನವರೆಗೂ ಮುಂದುವರೆಯಿರಿ. ಹೊಲೆಯುವಾಗ ಪಿನ್ ಗಳ ಬಗ್ಗೆ ಹುಷಾರಾಗಿರಿ. ಈಗ ಹೊರಗಿನ ಸೀಮನ್ನು ಮುಗಿಸಿದೇವೆ.
ಈಗ ಇನ್ನರ್ ಸೀಮನ್ನು ಹೊಲೆಯುವ ಸರದಿ. ಅಂತ್ಯದಿಂದ ಶುರು ಮಾಡಿ ಮೇಲಿನ ವರೆಗೂ ಹೊಲೆಯಿರಿ. ಇನ್ನರ್ ಸೀಮ್ ನ್ ಗುಟ್ಟೇನೆಂದರೆ ಒಂದೇ ಹೊಲಿಗೆ ಪೂರ್ತಿಯಾಗಿ ಇರುವುದು. ಆದ್ದರಿಂದ ಇನ್ನೊಂದು ಕಡೆನೂ ಇದನ್ನೇ ಕ್ರಾಚೆಟ್ ಎರಿಯಾ ಸಿಗುವವರೆಗೂ ನಿಲ್ಲಿಸದೆ ಮುಂದುವರಿಸಿ. ಇದಾದ ನಂತರ ಹೆಚ್ಚಾಗಿರುವ ದಾರವನ್ನು ಕತ್ತರಿಸಿ ಮತ್ತು ಹೊಲಿಗೆಯನ್ನು ಗಮನಿಸಿ. ಇದು ಹೀಗೆ ಕಾಣಬೇಕು. ಫ್ರೆಡ್ ಎಡ್ಜಸನ್ನು ಈಗ ಗಮನವಹಿಸಿ. ನಾವಿ ಜಿಗ್ ಜಾಗ್ ಹೊಲಿಗೆಯನ್ನು ಎರಡೂ ಇನ್ನರ್ ಮತ್ತು ಹೊರಗಿನ ಸೀಮಿಗೆ ಹೊಲೆಯಬೇಕು. ಜಿಗ್ ಜಾಗ್ ಬಟನ್ ಒತ್ತಿ ಸ್ಟಿಚ್ ಅಗಲವನ್ನು 4.5 ಗೆ ಸೆಟ್ ಮಾಡಿ ಮತ್ತು ಹೊಲಿಗೆಯ ಉದ್ದವನ್ನು 2 ಕ್ಕೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಹೊರಗಿನ ಸೀಮಿನಿಂದ ಶುರು ಮಾಡಿ ಒಂದು ಕಾಲನ್ನು ಮುಗಿಸಿ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ. ನಿಮ್ಮ ಹೊಲಿಗೆ ಎಷ್ಟು ಚೆನ್ನಾಗಿ ಕಾಣಿಸುತ್ತಿದೆ ಅಲ್ವಾ? ನಾವೀಗೆ ಇನ್ನೊಂದು ಕಾಲಿನ ಕೆಲಸ ಮಾಡೋಣ. ನೇರವಾಗಿ ಕೆಳಗಿನವರೆಗೂ ಹೊಲೆದರೆ ಮುಗಿಯಿತು.

ಈಗ ಇನ್ನರ್ ಸೀಮನ್ನು ಹೊಲೆಯುವುದು ಮತ್ತು ನೇರ ಹೊಲಿಗೆಯ ತರಹನೇ ಜಿಗ್ ಜಾಗ್ ಹೊಲಿಗೆಯನ್ನು ಒಂದೇ ಹೊಲಿಗೆಯಲ್ಲಿ ಮುಗಿಸಬೇಕು. ಕೆಳಗಿನಿಂದ ಹೊಲೆಯಲು ಪ್ರಾರಂಭಿಸಿ ಇನ್ನೊಂದು ಕಡೆ ತಲಪುವವರೆಗೂ ಹೊಲೆಯಿರಿ. ಸರಿಯಾಗಿದೆ!









## ಹಂತ 4 : ವೈಸ್ಟ್ ಬ್ಯಾಂಡನ್ನು ತಯಾರಿಸುವುದು

ವೈಸ್ಟ್ ಬ್ಯಾಂಡಿನ ತೆರೆದಿರುವ ತುದಿಯನ್ನು ಪಿನ್ ಮಾಡಿ. ನಾವೀಗ ಮಡಚಿರುವ ಎದುರಿನ ಭಾಗವಾದ ತೆರೆದಿರುವ ಭಾಗವನ್ನು ಹೊಲೆಯಬೇಕು. ಬಟ್ಟೆಯನ್ನು ಉಷಾ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ ಮತ್ತು ನೇರ ಹೊಲಿಗೆಗೆ ರೀಸೆಟ್ ಮಾಡಿ ಹೊಲೆಯುತ್ತಾ ಹೋಗಿ. ಕೊನೆಯನ್ನು ತಲುಪಿದಾಗ ದಾರವನ್ನು ಕತ್ತರಿಸಿ. ಇದು ಹೀಗೆ ಕಾಣಬೇಕು.















## ಹಂತ 5 : ವೈಸ್ಟ್ ಬ್ಯಾಂಡನ್ನು ಪ್ಯಾಂಟಿಗೆ ಹೊಲೆಯುವುದು

ಪ್ಯಾಂಟನ್ನು ಮೇಜಿನ ಮೇಲಿಡಿ. ಪ್ಯಾಂಟಿನ ಹಿಂಭಾಗ ನಿಮ್ಮನ್ನು ನೋಡುವಂತಿರಬೇಕು. ವೀಡಿಯೋದಲ್ಲಿ ತೋರಿಸಿರುವ ಹಾಗೆ ಸೈಡ್ ಸೀಮನ್ನು ಜೋಡಿಸಿ. ಗಮನವಹಿಸಿ ಎಕೆಂದರೆ ಸೀಮ್ ವಿರುದ್ಧ ದಿಕ್ಕಿಗೆ ಹೋಗುವ ಸಾಧ್ಯತೆಯಿದೆ. ನಂತರ ಪೂರ್ತಿ ಬೆಲ್ಟನ್ನು ಅರ್ಧಕ್ಕೆ ಮಡಚಿ. ಈ ಹಂತ ಸ್ವಲ್ಪ ಕಷ್ಟವೆನಿಸಬಹುದು ಆದರೆ ಇದು ಸರಿಯಾಗಿದ್ದರೆ ಯಾವುದು ನಿಮ್ಮನ್ನು ತಡೆಯುವುದಿಲ್ಲಾ. ಬಟ್ಟೆ ನಿಮ್ಮ ಕೈಯಲ್ಲಿ ಎರಡು ಸುತ್ತು ಸುತ್ತಿಕೊಳ್ಳಿ ಸಿದ್ದವಾಗಿರುವ ವೈಸ್ಟ್ ಬ್ಯಾಂಡನ್ನು ತೆಗೆದುಕೊಂಡು ಹೊಲೆದಿರುವ ಸೀಮ್ ಲೈನನ್ನು ಪ್ಯಾಂಟಿನ ಹೊಲೆದಿರುವ ಹಿಂಭಾಗದ ಸೀಮ್ ಮೇಲೆ ಇಡಬೇಕು.



ಬಲಭಾಗ ಬಲಭಾಗವನ್ನು ನೋಡುವಂತೆ ಇರಬೇಕು. ಈಗ ಇದನ್ನು ಪಿನ್ ಮಾಡಿ. ಬಟ್ಟೆಯನ್ನು ಸ್ಟ್ರೆಚ್ ಮಾಡಿ ಪಿನ್ ಮಾಡಿ ಪೂರ್ತಿ ಸುತ್ತಲೂ ಒಳಕ್ಕೆ ಇಲ್ಲಿ ತೋರಿಸಿರುವಂತೆ ಪಿನ್ ಮಾಡಿ. ನಾವೀಗ ಪಾಯಿಂಟೆಡ್ ಸೆಕ್ಷನನ್ನು ಹೊಲೆಯಬೇಕು.

ಹೊಲೆಯಲು ಪ್ರಾರಂಭಿಸಿ ಬೆಲ್ಟಿನ ಎಲ್ಲಾ ಭಾಗದಲ್ಲೂ ಹೊಲೆಯಿರಿ. ಹೊಲೆಯುವಾಗ ಪಿನ್ ಗಳನ್ನು ತೆಗೆಯಿರಿ. ನೀವು ಹೊಲಿಗೆಯನ್ನು ಗಮನಿಸಿ ಥ್ರೇಡ್ ಎಡ್ಜಸನ್ನು ಕಾಣಬಹುದು. ನಾವೀಗ ಇದನ್ನು ಜಿಗ್ ಜಾಗ್ ಹೊಲಿಗೆಯಿಂದ ಇದಕ್ಕೆ ಚೆಂದದ ಮೆರಗನ್ನು ಕೊಡೋಣ. ಜಿಗ್ ಜಾಗ್ ಸ್ಟಿಚ್ ಬಟನನ್ನು ಒತ್ತಿ ಹೊಲಿಗೆಯ ಅಗಲವನ್ನು 4.5 ಗೆ ಇಟ್ಟು ಮತ್ತು ಹೊಲಿಗೆಯ ಉದ್ದವನ್ನು 2ಕ್ಕೆ ಇಡಬೇಕು. ಪೂರ್ತಿಯಾಗಿ ಹೊಲೆಯಿರಿ. ಈಗ ಇದು ಇನ್ನಷ್ಟು ನೋಡಲು ಚೆನ್ನಾಗಿದೆ ಅಲ್ಲವೇ?

## ಹಂತ 6 : ಹೆಮ್ ಲೈನನ್ನು ಮುಗಿಸುವುದು

ಮಷೀನಿನಲ್ಲಿ ಎಲ್ಲಾ ಹೊಲೆದ ನಂತರ ಸ್ವಲ್ಪ ವಿಶ್ರಮಿಸಿ ಮತ್ತು ಕೈಯಲ್ಲಿ ಬಾಟಮ್ ಹೆಮ್ ಲೈನನ್ನು ಹೊಲೆಯೋಣ. ಸೂಜಿಯನ್ನು ತೆಗೆದುಕೊಂಡು ಹೆಮನ್ನು ಅರ್ಧ ಇಂಚು ಮಡಚಿ ನಂತರ ಇಲ್ಲಿ ತೋರಿಸಿರುವಂತೆ ಒಂದು ಇಂಚು ಮಡಚಿ ಹೊಲೆಯಲು ಪ್ರಾರಂಭಿಸಿ. ಎಲ್ಲಾ ಕಡೆನೂ ಹೊಲೆದು ನಿಮ್ಮ ಹ್ಯಂಡಿ ವರ್ಕನ್ನು ಗಮನಿಸಿ. ಹೊಲಿಗೆ ಇದನ್ನು ಹೋಲಬೇಕು. ಇನ್ನೊಂದು ಕಡೇನೂ ಇದನ್ನೇ ಪುನರಾವರ್ತಿಸಿ. ನಮ್ಮ ಹೊಲೆದಿರುವ ಬೆಲ್ಟ್ ಮತ್ತು ಹೆಮ್ ಲೈನ್ ಈ ರೀತಿ ಕಾಣಬೇಕು. ಪ್ಯಾಂಟನ್ನು ಹೊರಗಿಂದ ಒಳಕ್ಕೆ ತಿರುಗಿಸಿ. ಅರೆ ವಾ! ನಾವೀಗ ಮುಗಿಸಿದ್ದೇವೆ. ಸ್ಟೈಲಿಶಾದ ಪ್ಯಾಂಟ್ ಸ್ವಲ್ಪ ಹಂತದಲ್ಲೇ ತಯಾರಾಗಿದೆ. ನೀವು ಬೇರೆ ಬೇರೆ ಬಟ್ಟೆ ಮತ್ತು ಬಣ್ಣದಿಂದ ಪ್ರಯೋಗ ಮಾಡಬಹುದು. ಎನ್ವಿಯಬಲ್ ಸ್ಟೈಲನ್ನು ಮಾಡಿ ನಿಮ್ಮ ಸ್ನೇಹಿತರು ನೀವು ಪ್ಯಾಂಟನ್ನು ಎಲ್ಲಿ ಖರೀದಿಸಿದ್ದೀರಿ ಎಂದು ಬೆರಗಾಗುವಂತೆ ಮಾಡಿ. ನೀಮಗೆ ನಮ್ಮ ಕ್ರಿಯೇಷನ್ ಇಷ್ಟವಾಗಿದ್ದರೆ ಈ ವೀಡಿಯವನ್ನು ಶೇರ್ ಮಾಡಿ, ಲೈಕ್ ಮಾಡಿ ಮತ್ತು ಸಬ್ ಸ್ಕ್ರೈಬ್ ಮಾಡಲು ಮರೆಯಬೇಡಿ.